ದಿನಾಂಕಃ **05.08.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ **SNM** ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಊರು ರೊಪ್ಪ. ನನ್ನ ಹೆಂಡತಿ ಹೆಸರು ಶಕೀಲಾ ಬಾನು. ನನ್ನ ಹೆಂಡತಿ ವಾದಿಯ ದೂರದ ಸಂಬಂಧಿ ಆಗಬೇಕು. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯಲ್ಲ್ ಬರೆದಿರುವುದಿಲ್ಲ, ಕನ್ನಡ ಭಾಷೆಯಲ್ಲಿ ಬರೆದಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನ.

ನಾನು ಅಬ್ದುಲ್ ಜಲೀಲ್ ಸಾಬ್ ರವರನ್ನು ನೋಡಿರುತ್ತೇನೆ. ನಾನು ಅವರನ್ನು ಕರಾರು ಮಾಡಿಕೊಟ್ಟ ಸಮಯದಲ್ಲಿ ನೋಡಿರುತ್ತೇನೆ, ಅದರ ನಂತರ ನೋಡಿರುವುದಿಲ್ಲ. ಅವರು ಈಗ ತೀರಿಕೊಂಡಿರುತ್ತಾರೆ. ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ಜಲೀಲ್ ಸಾಬ್ ರವರಿಗೆ ಎಷ್ಟು ಜನ ಮಕ್ಕಳು, ಎಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ **12** ನೇ ಪ್ರತಿವಾದಿಯನ್ನು ನೋಡಿರುತ್ತೇನೆ. ಅವರನ್ನು ಬಹಳ ಹಿಂದಿನಿಂದ ನೋಡಿರುತ್ತೇನೆ. ಸದರಿ ಯವರು ಮಡಕಸಿರಾ ನಲ್ಲಿ ವಾಸವಿದ್ದಾರೆ, ಏನು ಉದ್ಯೋಗ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನನಗೆ ರೊಪ್ಪದಲ್ಲಿ ಜಮೀನು ಇಲ್ಲ, ಮನೆ ಇರುತ್ತದೆ. ನನ್ನ ಮನೆಯ ಖಾತೆ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಮನೆ ನನ್ನ ತಂದೆಯಿಂದ ಬಂದಿರುತ್ತದೆ. ಅದು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಈಗ ನನ್ನ ತಂದೆ ತೀರಿ ಕೊಂಡಿರುತ್ತಾರೆ. ಜಲೀಲ್ ಸಾಬ್ ರವರಿಗೆ ಸರ್ವೆ ನಂ. **64** ರಲ್ಲಿ **11** ಎಕರೆ **23** ಗುಂಟೆ , ಸರ್ವೆ ನಂ. **65** ರಲ್ಲಿ **5** ಎಕರೆ **5** ಗುಂಟೆ ಇರುತ್ತದೆ. ಸದರಿ ಜಮೀನು ಈಗಲೂ ಜಲೀಲ್ ಸಾಬ್ ರವರ ಹೆಸರಿನಲ್ಲಿ ಬರುತ್ತಿದೆ.

ನಾನು ಕರಾರು ಆಗುವ ಸಮಯದಲ್ಲಿ ಪಹಣಿ ನೋಡಿರುತ್ತೇನೆ. ಸದರಿ ಜಮೀನು ದಿಣ್ಣೆ ಜಮೀನು ಆಗಿರುತ್ತದೆ. ಅದರಲ್ಲಿ ಎಷ್ಟು ಮರಗಳು ಇತ್ತು ಎಂದು ನನಗೆ ಗೊತ್ತಿಲ್ಲ.

ವಾದಿ ನನ್ನ ಮಾಮ ಆಗಬೇಕು. ವಾದಿಯ ತಂಗಿ ಮಾಲಿನ್ ನನಗೆ ಪರಿಚಯ, ಸದರಿಯವರು ಜಲೀಲ್ ಸಾಬ್ ರವರ ದೊಡ್ಡ ಸೊಸೆ. ಜಲೀಲ್ ಸಾಬ್ ಹಾಗೂ ಮಾಲಿನ್ ರವರ ನಡುವೆ ಇದೇ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. **Pre-emption** ಗಾಗಿ ಮಾಲಿನ್ ಹಾಗೂ ಜಲೀಲ್ ಸಾಬ್ ರವರ ನಡುವೆ ಇದೇ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ